24	ಶಿವಮೊಗ್ಗ	1482	132.79
25	ತುಮಕೂರು	4503	360.84
26	ಉಡುಪಿ	1590	160.38
27	ಉತ್ತರ ಕನ್ನಡ	1176	91.66
	ಒಟ್ಟು	63058	5212.11

ಇ) ಯಶಸ್ವಿನಿ ಯೋಜನೆಯಲ್ಲಿ ಗ್ರಾಮೀಣ ಸಹಕಾರ ಸಂಘಗಳ ರೈತ ಸದಸ್ಯರ ಹಾಗೂ ಆತನ ಕುಟುಂಬದ ಸದಸ್ಯರು, ಗ್ರಾಮೀಣ, ನಗರ/ಪಟ್ಟಣ ಪ್ರದೇಶದಲ್ಲಿನ ಸಹಕಾರಿ ಮೀನುಗಾರರು, ಸಹಕಾರಿ ಬೀಡಿ ಕಾರ್ಮಿಕರು, ಸಹಕಾರಿ ನೇಕಾರರು ಹಾಗೂ ಸಹಕಾರಿ ಸಂಘ/ ಸಹಕಾರಿ ಬ್ಯಾಂಕುಗಳಲ್ಲಿ ಹಣಕಾಸಿನ ವಹಿವಾಟು ಹೊಂದಿರುವ ಸ್ವ–ಸಹಾಯ ಗುಂಪಿನ ಸದಸ್ಯರು ಮತ್ತು ಸ್ತ್ರೀಶಕ್ತಿ ಗುಂಪಿನ ಸದಸ್ಯರನ್ನು ಯೋಜನೆಯ ವ್ಯಾಪ್ತಿಗೆ ತರಲಾಗಿದೆ.

ಈ) ಪ್ರಸಕ್ತ 2010–11ನೇ ಸಾಲಿನ ಆಯವ್ಯಯದಲ್ಲಿ ಯೋಜನೆಯ ಅನುಷ್ಠಾನಕ್ಕಾಗಿ ಸರ್ಕಾರವು ರೂ.40.00 ಕೋಟಿಗಳ ಸಹಾಯಧನವನ್ನು ಒದಗಿಸಿದೆ.

ಕೃಷಿ ಮಾರುಕಟ್ಟೆ ಪ್ರಾಂಗಣ ಅಭಿವೃದ್ಧಿ

186(308) ಶ್ರೀ ಈಶ್ವರ ಭೀಮಣ್ಣ ಖಂಡ್ರೆ: (ಭಾಲ್ಕಿ) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರವು ರಾಷ್ಟ್ರೀಯ ತೋಟಗಾರಿಕಾ ಮಿಷನ್ ಯೋಜನೆಯಡಿಯಲ್ಲಿ ಬೀದರ್ ಜಿಲ್ಲೆಯ ಯಾವ ಯಾವ ಸ್ಥಳಗಳಲ್ಲಿ ಹಣ್ಣು ಮತ್ತು ತರಕಾರಿ ಮಾರುಕಟ್ಟೆಗಳನ್ನು ಅಭಿವೃದ್ಧಿಪಡಿಸುವ ಯೋಜನೆಯನ್ನು ಕೈಗೆತ್ತಿಕೊಂಡಿದೆ?

ಆ) ಹಾಗಿದ್ದಲ್ಲಿ ಇದಕ್ಕಾಗಿ ಅಗತ್ಯವಿರುವ ಹಣವೆಷ್ಟು

ಇ) ಈ ಯೋಜನೆಯ ಕಾಮಗಾರಿಗಳನ್ನು ಯಾರು ಯಾರಿಗೆ ನೀಡಲಾಗಿದೆ; ಈ ಕಾಮಗಾರಿಗಳನ್ನು ಎಷ್ಟು ಸಮಯದೊಳಗೆ

ಪೂರ್ಣಗೊಳಿಸಬೇಕಾಗಿದೆ; ಹಾಗೂ ಇದಕ್ಕಾಗಿ ಇಲ್ಲಿಯವರೆವಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ;

ಈ) ಈ ಕಾಮಗಾರಿಗಳು ಈಗ ಯಾವ ಹಂತದಲ್ಲಿವೆ?

ಉ) ಈ ಯೋಜನೆಯಡಿಯಲ್ಲಿ ಭಾಲ್ಕಿ ಮತಕ್ಷೇತ್ರದ ಯಾವ ಯಾವ ಮಾರುಕಟ್ಟೆ ಪ್ರಾಂಗಣವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ?

ಊ) ಆಯ್ಕೆ ಮಾಡಿಕೊಳ್ಳದೇ ಇದ್ದಲ್ಲಿ ಕಾರಣಗಳೇನು, ಯಾವ ಮಾನದಂಡದ ಮೇಲೆ ಈ ಯೋಜನೆಯನ್ನು ಜಾರಿಗೊಳಿಸಲು ಮಾರುಕಟ್ಟೆಗಳ ಪ್ರಾಂಗಣಗಳನ್ನು ಆಯ್ಕೆ ಮಾಡಿಕೊಳ್ಳಲಾಗುವುದು?

ಶ್ರೀ ಶಿವರಾಜ್ ಎಸ್ ತಂಗಡಗಿ(ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು):

ಅ)

(1) ಬೀದರಿನ ಹಳ್ಳದಕೆರೆಯಲ್ಲಿ ಉಪ ಮಾರುಕಟ್ಟೆ ಪ್ರಾಂಗಣ

(2) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಔರಾದ್‌ನ ಮುಖ್ಯ ಮಾರುಕಟ್ಟೆ ಪ್ರಾಂಗಣ.

ಆ)

(1) ಬೀದರ್ ಸಮಿತಿಯ ಕಾಮಗಾರಿ ಯೋಜನೆ ವೆಚ್ಚ ರೂ. 410.00 ಲಕ್ಷಗಳು. (2) ಔರಾದ್ ಸಮಿತಿಯ ಕಾಮಗಾರಿ ಯೋಜನಾ ವೆಚ್ಚ ರೂ 37.50 ಲಕ್ಷಗಳು.

ಇ) ಬೀದರ್ ಸಮಿತಿಯ ಹಳ್ಳದಕೆರೆ ಉಪ ಮಾರುಕಟ್ಟೆ ಪ್ರಾಂಗಣದಲ್ಲಿನ ಕಾಮಗಾರಿಯನ್ನು ಟೆಂಡರ್ ಮೂಲಕ ಗುತ್ತಿಗೆದಾರರಾದ ಶ್ರೀ ಭೀಮಶ್ರೀನಿವಾಸ್ ಇವರಿಗೆ ಅನುಮೋದಿತ ಟೆಂಡರ್ ಮೊತ್ತ ರೂ.3,54,74,255-00ಗಳಲ್ಲಿ ಕೈಗೊಳ್ಳಲು ದಿನಾಂಕ: 28/04/2010 ರಲ್ಲಿ ಕಾರ್ಯಾದೇಶ ನೀಡಲಾಗಿದೆ.

ಕಾಮಗಾರಿಯನ್ನು ಪೂರ್ಣಗೊಳಿಸಲು 6 ತಿಂಗಳ ಕಾಲಾವಕಾಶ ನೀಡಲಾಗಿದೆ.

ಸದರಿ ಕಾಮಗಾರಿಗಾಗಿ ಈವರೆಗೆ ಹಣ ಬಿಡುಗಡೆ ಮಾಡಿರುವುದಿಲ್ಲ.

ಔರಾದ್ ಸಮಿತಿಯ ಯೋಜನೆಯ ಕಾಮಗಾರಿಯನ್ನು ಟೆಂಡರ್ ಮೂಲಕ ಗುತ್ತಿಗೆದಾರರಾದ ಶ್ರೀ ಬಾಬುರಾವ್ ವಾಗ್ಮೋರೆ ಇವರಿಗೆ ಅನುಮೋದಿತ ಟೆಂಡರ್ ಮೊತ್ತ ರೂ 31,72,469-00ಗಳಲ್ಲಿ ಕೈಗೊಳ್ಳಲು ದಿ:14/08/2009ರಲ್ಲಿ

ಕಾರ್ಯಾದೇಶ ನೀಡಲಾಗಿದೆ.ಕಾಮಗಾರಿಯನ್ನು ಪೂರ್ಣಗೊಳಿಸಲು 4 ತಿಂಗಳ ಕಾಲಾವಕಾಶ ನೀಡಲಾಗಿದೆ.

ಸದರಿ ಕಾಮಗಾರಿಗೆ ಈವರೆಗೆ ರೂ 6,52,653/–ಗಳನ್ನು ಸಮಿತಿಯಿಂದ ಬಿಡುಗಡೆ ಮಾಡಲಾಗಿದೆ.

ರಾಷ್ಟ್ರೀಯ ತೋಟಗಾರಿಕಾ ಮಿಷನ್‌ನಿಂದ ಸಹಾಯಧನ ಬಿಡುಗಡೆಯಾಗಿಲ್ಲದೆ ಇರುವುದರಿಂದ ಹಾಗೂ ಸಮಿತಿಯು ಆರ್ಥಿಕವಾಗಿ ಸಧೃಢವಾಗಿಲ್ಲದ ಕಾರಣ ಆರ್ಥಿಕ ಮುಗ್ಗಟ್ಟಿನಿಂದ ಕಾಮಗಾರಿಯ ಅನುಷ್ಠಾನದಲ್ಲಿ ವಿಳಂಬವಾಗಿರುತ್ತದೆ.

ಈ) ಬೀದರ್ ಸಮಿತಿಯ ಹಳ್ಳದಕೆರೆ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಕಾಮಗಾರಿಯಲ್ಲಿನ ಗಿಡಗಂಟಿಗಳನ್ನು ತೆಗೆಯುವ ಹಾಗೂ ಬುನಾದಿ ಕೆಲಸ ಪ್ರಗತಿಯಲ್ಲಿದೆ.

ಔರಾದ್ ಸಮಿತಿ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಅಂಗಡಿ ಮಳಿಗೆಗಳು ಲಿಂಟಲ್ ಮಟ್ಟದಲ್ಲಿರುತ್ತವೆ ಹಾಗೂ ರಸ್ತೆ ಮತ್ತು ಚರಂಡಿ ಕೆಲಸಗಳನ್ನು ಪ್ರಾರಂಭಿಸಲಾಗಿದೆ.

ಉ) ರಾಷ್ಟ್ರೀಯ ತೋಟಗಾರಿಕಾ ಯೋಜನೆ ಯಡಿಯಲ್ಲಿ ಭಾಲ್ಕಿ ಮತಕ್ಷೇತ್ರದ ಯಾವುದೇ ಮಾರುಕಟ್ಟೆ ಸಮಿತಿಯ ಪ್ರಾಂಗಣವನ್ನು ಆಯ್ಕೆ ಮಾಡಿಕೊಂಡಿರುವುದಿಲ್ಲ.

ಊ) ಸ್ಥಳ ಲಭ್ಯವಿರುವುದಿಲ್ಲ.

ತೋಟಗಾರಿಕೆ ಉತ್ಪನ್ನಗಳ ಆವಶ್ಯಕ ಮತ್ತು ಅವುಗಳಿಗೆ ಒದಗಿಸಬೇಕಾದ ಮೂಲಭೂತ ಸೌಲಭ್ಯಗಳ ಅವಶ್ಯಕತೆ ಗಮನಿಸಿ ರಾಷ್ಟ್ರೀಯ ತೋಟಗಾರಿಕಾ ಮಿಶನ್ ಯೋಜನೆಯಡಿಯಲ್ಲಿ ಮಾರುಕಟ್ಟೆ ಆಯ್ಕೆ ಮಾಡಲಾಗುವುದು.

ರಸ್ತೆ ನಿರ್ಮಾಣ

187(309) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?